<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**</u>
<u>**ಸಿ.ಸಿ.15/2025**</u>

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ. ಪ್ರದೀಪ್ | ಫ್ರಾಸಾ-5 |
| ತಂದೆಯ ಹೆಸರು | : ಕರಿಯಪ್ಪ ಆರ್. | ಚಾಸಾ-9 |
| ವಯಸ್ಸು | : 34 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಶು ವೈದ್ಯಾಧಿಕಾರಿ | ದಿನಾಂಕಃ 29.12.2025. |
| ವಾಸಸ್ಥಳ | : ಚಿಕ್ಕಮಗಳೂರು | |

<u>**:ಮುಖ್ಯ ವಿಚಾರಣೆ: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**</u>

ನಾನು ನವೆಂಬರ್ 2022 ರಿಂದ ಚಿಕ್ಕಮಗಳೂರಿನ ಪಶು ಆಸ್ಪತ್ರೆಯಲ್ಲಿ ಪಶುವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.08.11.2024 ರಂದು ಬೆ.11.00 ಗಂಟೆಗೆ ಚಿಕ್ಕಮಗಳೂರು ಸಿಐಡಿ ಪೋಲಿಸ್ ಅರಣ್ಯ ಸಂಚಾರ ದಳದ ದಿಲೀಪ್ ರವರು ಚಾಸಾ-1 ರವರ ಮನವಿ ಪತ್ರದೊಂದಿಗೆ ಒಂದು ಟಬ್ ನಲ್ಲಿ ನಾಲ್ಕು ಜೀವಂತ ಆಮೆಗಳನ್ನು ತಂದು ಪರೀಕ್ಷೆಗೆ ಹಾಜರುಪಡಿಸಿದ್ದು ನಾನು ಸದರಿ ಆಮೆಗಳನ್ನು ಪರೀಕ್ಷಿಸಿದಾಗ ನಾಲ್ಕು ಆಮೆಗಳ ಪೈಕಿ ಮೂರು ಆಮೆಗಳು ಇಂಡಿಯನ್ ಬ್ಲಾಕ್ ಟರ್ಟಲ್/ಇಂಡಿಯನ್ ಪಾಂಡ್ ಟೆರಪಿನ್ ಜಾತಿಗೆ ಸೇರಿದ್ದು ಮತ್ತೊಂದು ಆಮೆ ಇಂಡಿಯನ್ ಫ್ಲಾಗ್ ಶಲ್ ಟರ್ಟಲ್ ಆಗಿತ್ತು. ಇಂಡಿಯನ್ ಬ್ಲಾಕ್ ಟರ್ಟಲ್/ಇಂಡಿಯನ್ ಪಾಂಡ್ ಟೆರಪಿನ್ ಒಂದು ಆಮೆಯ ಹಿಂಭಾಗದ ಬಲಗಾಲು ಮುರಿದಿದ್ದು ಅದು ಹಳೇಯ ಗಾಯವಾಗಿತ್ತು. ಇದನ್ನು ಹೊರತುಪಡಿಸಿ ಸದರಿ ನಾಲ್ಕು ಆಮೆಗಳ ಆರೋಗ್ಯ ಸ್ಥಿತಿ ಚೆನ್ನಾಗಿತ್ತು. ಈ ಸಂಬಂಧ ನಾನು ಪ್ರಮಾಣಪತ್ರ ನೀಡಿದ್ದೇನೆ.

ಸಾಕ್ಷಿಯು ನಿಪಿ-8 ರ ಮನವಿ ಪತ್ರವನ್ನು ನೋಡಿ ಗುರುತಿಸಿ, ನಿಪಿ-9 ರ ಪ್ರಮಾಣಪತ್ರವನ್ನು ತಾವು ನೀಡಿರುವ ಬಗ್ಗೆ ಗುರುತಿಸುತ್ತಾರೆ. ನಿಪಿ-9 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-14 ರಲ್ಲಿ ಕಾಣುವ ಆಮೆಗಳನ್ನು ಪರೀಕ್ಷಿಸಿದ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ಎಂ.ಒ.1 ನ್ನು ನೋಡಿ ಅದೇ ಟಬ್ ನಲ್ಲಿ ಆಮೆಗಳನ್ನು ತಂದು ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ.

<u>**ಮರು ವಿಚಾರಣೆ ಇಲ್ಲ**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.15/2025**

| | | |
|---|---|---|
| ಸಾಕ್ಷಿದಾರರ ಹೆಸರು | : ವಿಂತೇಶ್ ಗೌಡ | ಫ್ರಾಸಾ-6 |
| ತಂದೆಯ ಹೆಸರು | : ಶಿವೇಗೌಡ | ಚಾಸಾ-3 |
| ವಯಸ್ಸು | : 43 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ 29.12.2025 |
| ವಾಸಸ್ಥಳ | : ಬಿಳುಗುಳ | |

**:ದೋಷಾರೋಪಣೆ ಪೂರ್ವ ಮುಖ್ಯ ವಿಚಾರಣೆ: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-2 ರವರ ಪರಿಚಯವೂ ಸಹಾ ನನಗಿದೆ.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-3 ರ ಪೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ಮುಂದುವರೆದು ನಿಪಿ-3 ರಿಂದ 5 ರ ಫೋಟೋಗಳಲ್ಲಿ ಕಾಣುವ ಆಮೆಗಳ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

1 ವರ್ಷದ ಹಿಂದೆ ನಾನು ಬಿಳುಗುಳದ ಇಂದಿರಾನಗರದಲ್ಲಿ ಇರುವಾಗ ಪೋಲಿಸರು ನನ್ನ ಸಹಿಗಳನ್ನು ಪಡೆದು, ಪೋಟೋಗಳನ್ನು ತೆಗೆದಿದ್ದಾರೆ. ಯಾವ ವಿಚಾರಕ್ಕೆ ನನ್ನ ಸಹಿಯನ್ನು ಪಡೆದು ಪೋಟೋಗಳನ್ನು ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾವು ಸಹಿ ಮಾಡುವ ಕಾಲಕ್ಕೆ ಆಮೆಗಳನ್ನು ನೋಡಿರಲಿಲ್ಲ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನು ವಶಕ್ಕೆ ಪಡೆದಿಲ್ಲ. ನಾನು ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ಈಗ ಓದಿ ಹೇಳಿದಂತೆ ದಿ.08.11.2024 ರಂದು ಮೂಡಿಗೆರೆ ಪೋಲಿಸರ ಮುಂದೆ ನನ್ನ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-21 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.